
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –19 ದಿನಾಂಕ : 20–11–2024

## ದಿನಾಂಕ: 20.11.2024 ರ ವಾರದ ಸಭೆಯ ವರದಿ

ದಿನಾಂಕ: 20.11.2024 ರಂದು ರೋಟರಿ ಸೆಂಟಿನರಿ ಟ್ರಸ್ಟ್‌ನ ಸರ್ವ ಸದಸ್ಯರ ಸಭೆ ಏರ್ಪಾಡಾಗಿತ್ತು. ರೊ. ಎಸ್. ಮಂಜುನಾಥ್‌ರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದ ನಂತರ ಅಂದಿನ ರೋಟರಿ ಸಭಾ ಕಾರ್ಯಕ್ರಮದಂತೆ ವೇದಿಕೆಯಲ್ಲಿ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರವರು, ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು ವೇದಿಕೆಯಲ್ಲಿದ್ದರು. ರೋಟರಿಯ ಸಭಾ ಕಾರ್ಯಕ್ರಮದ ನಂತರ ರೋಟರಿ ಸೆಂಟಿನರಿ ಟ್ರಸ್ಟ್‌ನ ಸರ್ವಸದಸ್ಯರ ಸಭೆ ನಡೆಯಿತು. ಕಲಾಪದಲ್ಲಿ ಟ್ರಸ್ಟ್‌ನ ಸದಸ್ಯರುಗಳು ಚಟುವಟಿಕೆಯಿಂದ ಪಾಲ್ಗೊಂಡಿದ್ದರು.







ಆರಂಭದಲ್ಲಿ ರೊ.ವನಿತಾ ಸಂದೀಪ್‌ರವರಿಂದ "ತಾಯೆ ನಿನ್ನ ಮಡಿಲಲಿ ಕಣ್ಣು ತೆರೆದ ಕ್ಷಣದಲಿ" ಹಾಡನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥಿಸಿದರು. ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ಹಾಗೂ ರೋಟರಿ ಸದಸ್ಯರಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದರು. ರೊ. ಬಿ.ಎನ್. ಸತ್ಯನಾರಾಯಣ, ರೊ.ವೈ.ಗೋಪಾಲಕೃಷ್ಣ ಗುಪ್ತ ಮತ್ತು ರೊ.ಎ. ಮಂಜುನಾಥರವರು ವೇದಿಕೆಗೆ ಆಗಮಿಸಿ ಅಧ್ಯಕ್ಷರಿಂದ ಹುಟ್ಟು ಹಬ್ಬದ ಶುಭಾಶಯಗಳನ್ನು ಸ್ವೀಕರಿಸಿದರು. ಮುಂದುವರೆದ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ರೊ.ವೈ.ವಿ. ವೆಂಕಟರಮಣ ಜೋಯ್ಸ್‌ರವರು ರಾಮಿನಕೊಪ್ಪ ಸರ್ಕಾರಿ ಶಾಲೆಗೆ ಶುದ್ಧ ಕುಡಿಯುವ ನೀರಿಗಾಗಿ ವಾಟರ್ ಪ್ಯೂರಿಫ್ಯಯರ್ ದೇಣಿಗೆಯಾಗಿ ನೀಡಿದ್ದು, ಆ ವ್ಯವಸ್ಥೆಗೆ ಸಹಕರಿಸಿದ್ದಕ್ಕೆ ಧನ್ಯವಾದ ತಿಳಿಸಲಾಯಿತು. ನಮ್ಮ ಕ್ಲಬ್‌ನ ಪದವಿ ಸ್ವೀಕಾರ ಸಮಾರಂಭಕ್ಕೆ ಕಾರಣಾಂತರಗಳಿಂದ ಗೈರು ಹಾಜರಾಗಿದ್ದ ರೊ. ಶೈಲಿನ್ ಮತ್ತು ರೊ.ಎನ್.ಎಸ್. ಶ್ರೀಧರ್‌ರವರಿಗೆ ರೊ.ಪಿಡಿಜಿ. ಡಾ.ಪಿ.ನಾರಾಯಣರವರು ರೋಟರಿಯ ಕಾರ್ಯಕಾರಿ ಮಂಡಳಿ ಸದಸ್ಯತ್ವ ಪಿನ್ ಹಾಕಿ ರೋಟರಿಯ ಪುಸ್ತಿಕೆ ನೀಡಿ ಗೌರವಿಸಿದರು.

ರೋಟರಿ ಫೌಂಡೇಷನ್ ಮಾಸವಾದ್ದರಿಂದ ಅಧ್ಯಕ್ಷರ ಮನವಿ ಮೇರೆಗೆ ರೊ.ಪಿಡಿಜಿ. ಡಾ.ಪಿ.ನಾರಾಯಣರವರು ಮಾತನಾಡಿ, ನವೆಂಬರ್ ತಿಂಗಳನ್ನು ಪ್ರತೀ ವರ್ಷವೂ ರೋಟರಿಯು ರೋಟರಿ ಫೌಂಡೇಷನ್ ಮಾಸವನ್ನಾಗಿ ಆಚರಿಸುತ್ತಿದೆ. ಶಿಕಾಗೋ ನಗರದಲ್ಲಿ ಸ್ನೇಹ ಸೌಹಾರ್ದಕ್ಕಾಗಿ ಕೇವಲ 4 ಜನ ವೃತ್ತಿಪರರಿಂದ ಆರಂಭವಾದ

2ನೇ ಪುಟಕ್ಕೆ

## ಈ ವಾರದ ಸಭೆ

ದಿನಾಂಕ : 27–11–2024 ಬುಧವಾರ ಸಂಜೆ 7:00

### ಕೌಟುಂಬಿಕ ಸ್ನೇಹ ಮಿಲನ

**ರೋಟರಿ ಸದಸ್ಯರಿಂದ ಪ್ರತಿಭಾ ಕಾರಂಜಿ**

ವಲಯ ಮಟ್ಟದ ಕಲ್ಚರಲ್ ಸ್ಪರ್ಧೆಯಲ್ಲಿ ಭಾಗವಹಿಸಿದವರು ಹಾಗೂ ಇತರ ಸದಸ್ಯರಿಂದ ಗೀತಗಾಯನ, ನೃತ್ಯ, ಅಭಿನಯ

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: ಶ್ರೀರಾಮ ಮಂದಿರ ಸಮುದಾಯ ಭವನ
ಓ.ಟಿ. ರಸ್ತೆ, ಮೊದಲನೇ ತಿರುವು, ಶಿವಮೊಗ್ಗ










ಈ ಸೇವಾ ಸಂಸ್ಥೆ ಸುಮಾರು 207 ದೇಶದಲ್ಲಿ 35000 ಕ್ಕೂ ಹೆಚ್ಚು ರೋಟರಿ ಕ್ಲಬ್‌ಗಳ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾರ್ವಜನಿಕ ಸೇವೆ ಮಾಡುತ್ತಿದೆ. 1917 ರ ಅಂತರರಾಷ್ಟ್ರೀಯ ಅಧ್ಯಕ್ಷ ರೊ.ಆರ್ಚ ಕ್ಲಂಫ್‌ರವರಿಂದ ಸಣ್ಣ ಮಟ್ಟದಲ್ಲಿ ಆರಂಭವಾದ ಈ ಫೌಂಡೇಷನ್ ಇಂದು ಅಗಾಧವಾಗಿ ಬೆಳೆದಿದೆ. ವಿಶ್ವದಾದ್ಯಂತ ಒಳ್ಳೆಯದನ್ನು ಮಾಡಲು ಬದ್ಧತೆಯನ್ನು ಹೊಂದಿದೆ. ಇದರ ಮೂಲ ನಿಧಿ ರೋಟರಿ ಸದಸ್ಯರುಗಳದ್ದೇ ಆಗಿದ್ದು, ರೋಟರಿ ಸದಸ್ಯರುಗಳಿಂದ ದೇಣಿಗೆ ಸಂಗ್ರಹ ಮಾಡಿ ಬೇರೆ ಬೇರೆ ದೇಶಗಳಿಗೆ ಸಾಮಾಜಿಕವಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲು ಸಹಾಯ ಮಾಡುತ್ತಿದೆ ಎಂದರು. ಮುಂದುವರೆದ ರೋಟರಿ ಫೌಂಡೇಷನ್ ಬಂಡವಾಳವೇ ನಾವು. ನಿಮ್ಮ ಉದಾರತೆಯಿಂದ ರೋಟರಿ ಫೌಂಡೇಷನ್ ಬೆಳೆದಿದೆ. ರೋಟರಿ ಫೌಂಡೇಷನ್ ನಿಮ್ಮಿಂದ ಹಣವನ್ನು ಸಂಗ್ರಹಿಸಿ ಅದನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ, ಸಾರ್ವಜನಿಕ ಉಪಯೋಗಕ್ಕೆ ವ್ಯಯಿಸುತ್ತದೆ. ಪೋಲಿಯೋ ನಿರ್ಮೂಲನದಂತಹ ಅಂತರರಾಷ್ಟ್ರೀಯ ಸಮಸ್ಯೆಯನ್ನು ನೀಗಿಸಿದಂತಹ ಹೆಗ್ಗಳಿಕೆ ರೋಟರಿ ಫೌಂಡೇಷನ್‌ಗೆ ಇದೆ. ದೇಣಿಗೆ ನೀಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಹುಟ್ಟು ಹಬ್ಬದ ಸಂದರ್ಭದಲ್ಲಿ, ವಿವಾಹದ ದಿನಾಂಕದಂದು, ಹೀಗೆ ಅವಕಾಶಗಳನ್ನು ಬಳಸಿಕೊಂಡು ದೇಣಿಗೆ ನೀಡಬಹುದು ಎಂದರು. ನೀವು ನೀಡುವ ದೇಣಿಗೆ 3 ವರ್ಷಗಳ ನಂತರ ಸಮಾಜಕ್ಕೆ ಕಾರ್ಯಯೋಜನೆಯಾಗಿ (ಪ್ರಾಜೆಕ್ಟ್‌ಗಳ ಮೂಲಕ) ವಾಪಸ್ಸು ಬರುತ್ತದೆ. ಇಡೀ ರೋಟರಿ ಜಿಲ್ಲೆಯಲ್ಲಿ ರೋಟರಿ ಫೌಂಡೇಷನ್‌ನಿಂದ ಹೆಚ್ಚು ಅನುದಾನ ಪಡೆದು ಪ್ರಾಜೆಕ್ಟ್‌ಗಳನ್ನು ಮಾಡಿರುವುದು ನಮ್ಮ ರೋಟರಿ ಕ್ಲಬ್ ಶಿವಮೊಗ್ಗ ಎಂದರು. ನಮ್ಮ ಸೇವೆ ಸಾರ್ವಜನಿಕರಿಗೆ ಅವಶ್ಯಕತೆ ಇದೆ. ನಮ್ಮ ರೋಟರಿಯಿಂದ, ಸರ್ಕಾರಿ ಶಾಲೆಗಳಿಗೆ ನೆರವು, ಗೋದಾನ, ಸಾರ್ವಜನಿಕ ಶೌಚಾಲಯ, ರೋಗಿಗಳಿಗೆ ಆರೋಗ್ಯ ನೀಡುವ ಸಂಸ್ಥೆಗೆ ನೆರವು ಹೀಗೆ ಹಲವಾರು ಸಂಸ್ಥೆಗಳಿಗೆ ಪ್ರಾಜೆಕ್ಟ್‌ಗಳು ಆಗಿವೆ. ಇವೆಲ್ಲಕ್ಕೂ ನೀವು ನೀಡಿದ ಹಣದಿಂದಲೇ ದೊಡ್ಡ ಮಟ್ಟದಲ್ಲಿ ಕಾರ್ಯಗಳಾಗಿವೆ. ಅಮೇರಿಕಾದಲ್ಲಿ ಚಾರಿಟಿ ನ್ಯಾವಿಗೇಟರ್ ಎಂಬ ಸಂಸ್ಥೆ ಸರ್ವೆ ಮೂಲಕ ಕಳೆದ ಎಂಟು ವರ್ಷಗಳಿಂದ ನಿರಂತರವಾಗಿ 4 ಸ್ಟಾರ್ ಘೋಷಿಸಿಕೊಂಡು ಅತ್ಯುತ್ತಮ ಕಾರ್ಯನಿರ್ವಹಣೆಗೆ ರೋಟರಿ ಫೌಂಡೇಷನ್ ಪಾತ್ರವಾಗಿದೆ. ರೋಟರಿ ಫೌಂಡೇಷನ್‌ನ ನಂಬಿ ನೀವು ದೇಣಿಗೆ ನೀಡಬಹುದು. ನೀವು ನೀಡಿದ ದೇಣಿಗೆ ಸಮರ್ಪಕವಾಗಿ ನಿರ್ವಹಣೆಯಾಗಿ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿ, 1000 ಡಾಲರ್ ನೀಡಿದವರಿಗೆ ಪಿಹೆಚ್‌ಎಫ್ ಮುಂತಾದ ಮೆಚ್ಚುಗೆ ಸಿಗುತ್ತದೆ ಎಂದರು. ಆದ್ದರಿಂದ ಹೆಚ್ಚೆಚ್ಚು ರೋಟರಿ ಫೌಂಡೇಷನ್‌ಗೆ ದೇಣಿಗೆ ನೀಡಿ ಎಂದರು. ಇದೇ ಸಂದರ್ಭದಲ್ಲಿ ಪಿ.ಹೆಚ್.,ಎಫ್ ಪಡೆದುಕೊಳ್ಳಲು ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರು 500 ಡಾಲರ್ (ರೂ.42,000.00) ರೊ. ಎನ್.ಜಿ. ಉಷಾರವರು 500 ಡಾಲರ್(ರೂ.42,000.00) ಮೊಬಲಗಿನ ಚೆಕ್‌ನ್ನು ರೊ.ಪಿಡಿಜಿ. ಡಾ. ಪಿ. ನಾರಾಯಣರವರಿಗೆ ನೀಡಿದರು. ರೊ. ಸೆಂಥಿಲ್ ವೇಲನ್‌ರವರು ವಲಯ ಮಟ್ಟದ ರೋಟರಿ ಕ್ರೀಡಾ ಸ್ಪರ್ಧೆಗಳ ಬಗ್ಗೆ ವಿವರಣೆ ನೀಡಿದರು.

ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ರೋಟರಿ ಸಭೆಯನ್ನು ಮುಂದೂಡಿ, ರೋಟರಿ ಸೆಂಟಿನರಿ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ರೊ. ಎನ್. ಎಸ್. ಶ್ರೀಧರ್‌ರವರಿಗೆ ಸರ್ವ ಸದಸ್ಯರ ಸಭೆ ನಡೆಸಲು ಅನುವು ಮಾಡಿಕೊಟ್ಟರು.







ರೊ. ಡಾ. ಗಿರೀಶ್ ಮತ್ತು ಡಾ. ಶೋಭಾರವರ ಆರಾಧನ ಆರ್ಥೋಪೆಡಿಕ್ ಆಸ್ಪತ್ರೆಯ ರೋಬೋಟಿಕ್ ತಂತ್ರಜ್ಞಾನ ಅಳವಡಿಕೆಯ ಉದ್ಘಾಟನಾ ಸಮಾರಂಭ ಹರ್ಷ ಹೋಟೆಲ್‌ನಲ್ಲಿ ನಡೆಯಿತು. ನಮ್ಮ ಕ್ಲಬ್‌ನ ಸದಸ್ಯರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ರೊ. ಪಿಡಿಜಿ. ಡಾ. ಪಿ. ನಾರಾಯಣ್‌ರವರನ್ನು ಸನ್ಮಾನಿಸಲಾಯಿತು.

**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

## Rotary Zonal Sports
## ವಲಯ ಮಟ್ಟದ ಕ್ರೀಡಾ ಸ್ಪರ್ಧೆಗಳು

**Date of the Event: 08-12-2024, Suday**

| | | |
|---|---|---|
| I | Outdoor Games | 8:30 am to 1.00 pm (lunch)<br>ಸಹ್ಯಾದ್ರಿ ಕಾಲೇಜ್ ಮೈದಾನ, ಶಿವಮೊಗ್ಗ |
| II | Indoor Games | Indoor Nehru Stadium<br>RTO office Road, Shimoga<br>2.30 pm to 6.30 pm |

**III List of Events**

**A) Rotarians**


| | |
|---|---|
| Outdoor Games | Cricket<br>Volley Ball, Tug of War |
| Indoor Games: | Carrom Doubles, Chess,<br>Shuttle Badminton,<br>Single and Doubles |

**B) Lady Rotarians and Anns**

| | |
|---|---|
| Outdoor Games | Throw Ball and Tug of War |
| Indoor Games | Carrom Dubles, Chess<br>Shuttle Badminton<br>Single and Doubles |

| | |
|---|---|
| C) Annets and Jonhs | Chess, Shuttle Bandminton<br>Single and Doubles |

**Note: Athletic Events** ಜಿಲ್ಲಾ ಮಟ್ಟದಲ್ಲಿ ಮಾತ್ರ ನಡೆಯುತ್ತದೆ. ವಲಯ ಮಟ್ಟದ ಸ್ಪರ್ಧೆಗಳಿಗೆ ಹೆಸರು ಕೊಡುವವರು ರೊ. ಸೆಂಥಿಲ್ ವೇಲನ್, ಸ್ಪೋರ್ಟ್ಸ್ ಕಮಿಟಿ ಛೇರ್ಮನ್, ಮೊ.: 98440 21221
ಕೊನೆಯ ದಿನಾಂಕ: 27–11–2024.
**No Spot Registration.**
ಹೆಚ್ಚಿನ ವಿವರಗಳಿಗೆ ರೋಟರಿ ಗ್ರೂಪ್ ಗಮನಿಸಿ




**Rotary Information**
**DISTRICT PROJECTS 2024-25**

1. Awareness of Arogya Swatchatha
2. Awareness of Education & Law
3. Awareness of Green & Water
4. Awareness of Rasthe Sanchara Safety

## *ROTARY INFORAMATION*

**RI President Stephanie A. Urchick**
**2024-2025 Theme - "The Magic of Rotary"**


**"The Magic of Rotary"** is a theme that emphasizes the transformative power of Rotary International's work in communities around the world. The message behind this theme likely centers on the idea that through Rotary's service, dedication, and collaboration, incredible things can be achieved to make the world a better place.Here's a message inspired by the theme **"The Magic of Rotary".**

"In every corner of the globe, Rotary brings the magic of hope, compassion, and change. Like magicians of goodwill, Rotarians weave together threads of service, turning dreams into reality and challenges into triumphs. With each project, each act of kindness, we unleash the power of Rotary to create lasting impact and transform lives. Together, let's continue to spread the magic of Rotary, illuminating darkness with light, and making our world shine brighter for generations to come."

This message highlights the transformative nature of Rotary's work and the dedication of its members to create positive change in the world. It emphasizes the idea that by working together, Rotarians can perform "magic" in their communities, bringing hope and joy to those in need.

## *ROTARY INFORMATION...*
## DISTRICT PROJECTS 2024-25





## ಸಂಪಾದಕೀಯ

### ಹಂಚಿ ತಿನ್ನುವ ಪಾಠ

ವಿನೋಬಾ ಭಾವೆಯವರು ಭಾರತದ ಮಹಾನ್ ವ್ಯಕ್ತಿಗಳಲ್ಲೊಬ್ಬರು. ಸಿರಿವಂತರ ಮನವೊಲಿಸಿ ಅವರ ಭೂಮಿಯ ಸ್ವಲ್ಪ ಭಾಗವನ್ನು ಬಡವರಿಗೆ ನೀಡುವ ಭೂದಾನ ಚಳವಳಿಯ ಆದ್ಯ ಪ್ರವರ್ತಕರು. ಗಾಂಧೀಜಿಯವರ ಕಟ್ಟಾ ಅನುಯಾಯಿಯಾದ ವಿನೋಬಾ ಸತ್ಯಾಗ್ರಹಿಯೂ ಹೌದು. ಅವರ ಬಾಲ್ಯದ ಎರಡು ಘಟನೆಗಳು ಇಲ್ಲಿವೆ.

ಅವರ ಮನೆಯ ಹಿತ್ತಲಲ್ಲಿ ಬಹಳ ರುಚಿಯಾದ ಹಣ್ಣು ಬಿಡುವ ಹಲಸಿನ ಮರವೊಂದಿತ್ತು. ಅವರ ತಾಯಿ ರುಕ್ಮಿಣಿದೇವಿ ಹಲಸಿನ ಹಣ್ಣನ್ನು ಬಿಡಿಸಿ ಎಲೆಯ ದೊನ್ನೆಗಳಲ್ಲಿ ಹಾಕಿಡುತ್ತಿದ್ದರು. ಅಕ್ಕಪಕ್ಕದ ಮನೆಗಳಿಗೆ ಹೋಗಿ ಹಣ್ಣು ಕೊಟ್ಟು ಬಂದ ನಂತರವೇ ಮನೆಯವರೆಲ್ಲ ತಿನ್ನಬೇಕಿತ್ತು. ಮಗನಿಗೆ, 'ವಿನ್ಯಾ, ಮೊದಲು ಎಲ್ಲರಿಗೂ ಕೊಟ್ಟು ತಿನ್ನಬೇಕು, ಯಾರು ಇಟ್ಟುಕೊಳ್ಳುತ್ತಾರೋ ಅವರು ರಾಕ್ಷಸರು' ಎನ್ನುತ್ತಿದ್ದರು.

ಇನ್ನೊಮ್ಮೆ ಪಕ್ಕದ ಮನೆಯ ಮಹಿಳೆ ಅನಾರೋಗ್ಯದಿಂದ ನರಳುತ್ತಿರುವಾಗ ರುಕ್ಮಿಣಿದೇವಿ ತಮ್ಮ ಮನೆಯಲ್ಲಿ ಅಡುಗೆ ಮಾಡಿಟ್ಟು ನಂತರ ಅವರ ಮನೆಗೆ ಹೋಗಿ ಅಡುಗೆ ಮಾಡಿ ಬರುತ್ತಾರೆ. ಆಗ ಬಾಲಕ ವಿನೋಬಾ ಕೇಳುತ್ತಾರೆ, 'ಅಮ್ಮಾ ಮೊದಲು ಬೇರೆಯವರಿಗೆ ಕೊಡಬೇಕೆಂದು ಹೇಳ ನೀನು ನಮ್ಮ ಮನೆಯಲ್ಲಿ ಮೊದಲು ಅಡುಗೆ ಮಾಡಿದ್ದು ತಪ್ಪಲ್ಲವಾ?' ಆಗ ತಾಯಿ ಮುಗುಳ್ನಗುತ್ತಾ ಹೇಳುತ್ತಾರೆ. "ಇಲ್ಲ, ಮೊದಲೆ ಅಡುಗೆ ಮಾಡಿದರೆ ಅರಿ ತಣ್ಣಗಾಗುತ್ತಲ್ಲ, ಅವರು ಬಿಸಿಬಿಸಿಯಾಗಿ ಊಟ ಮಾಡಲೆಂದು ಹಾಗೆ ಮಾಡಿದೆ".




ವಿನೋಬಾ ಹೇಳುತ್ತಾರೆ, 'ನಾನು ಸತ್ಪುರುಷರ ಸಂಗದಿಂದ, ಮಹಾನುಭಾವರ ಅನುಭವಗಳಿಂದ ಕೂಡಿದ ಗ್ರಂಥಗಳಿಂದ ಕಲಿತದ್ದನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಟ್ಟು, ನನ್ನ ತಾಯಿಯಿಂದ ಪಡೆದ ಶಿಕ್ಷಣವನ್ನು ಎರಡನೇ ತಟ್ಟೆಯಲ್ಲಿಟ್ಟರೆ ಎರಡನೇ ತಟ್ಟೆಯ ತೂಕವೇ ಜಾಸ್ತಿ. ನಮ್ಮಮ್ಮನ ಈ ಹಂಚಿ ತಿನ್ನುವ ರೂಢಿ ಎಷ್ಟು ಪರಿಣಾಮಕಾರಿ ಆಯಿತೆಂದರೆ ಅದರಿಂದ ಭೂದಾನ ಯಜ್ಞದ ಪರಿಕಲ್ಪನೆ ನನಗೆ ಸಿಕ್ಕಿತು'.

ಬಹಳಷ್ಟು ಪಾಲಕರು, ಮಕ್ಕಳು ಓದುವುದಿಲ್ಲ, ಹೇಳದ ಮಾತು ಕೇಳುವುದಿಲ್ಲ ಎಂದು ದೂರುತ್ತಿರುತ್ತಾರೆ. ಅದಕ್ಕೆ ಕಾರಣ ಮಕ್ಕಳು, ತಂದೆತಾಯಿಗಳು ಹೇಳಿದ್ದನ್ನು ಕೇಳುವುದಕ್ಕಿಂತ ಜಾಸ್ತಿ ಅವರು ಮಾಡಿದ್ದನ್ನು ಅನುಕರಿಸುತ್ತಾರೆ. 'ಮಣ ಮಾತಿಗಿಂತ ತೊಲ ಕೃತಿ ಲೇಸು' ಎಂಬ ಗಾದೆಯಂತೆ ಉಪದೇಶಕ್ಕಿಂತ ಆಚರಣೆಗೆ ಒತ್ತು ಕೊಡುವುದರ ಮೂಲಕ ಬಹಳಷ್ಟು ಸಮಸ್ಯೆಯನ್ನು ಬಗೆಹರಿಸಬಹುದು. ರುಕ್ಮಿಣಿ ದೇವಿಯವರ ಹಂಚುವ ಸ್ವಭಾವ ಅವರಿಗೇ ಅರಿವಿಲ್ಲದಂತೆ ಅಸಂಖ್ಯ ಭೂರಹಿತರ ಬಾಳು ಬೆಳಗಲು ಕಾರಣವಾದಂತೆ, ಸಮಾಜಮುಖಿಯಾದ ನಮ್ಮ ಪುಟ್ಟ ಕೆಲಸ ಮುಂದಿನ ಪೀಳಿಗೆಗೆ ಮತ್ತಷ್ಟು ಒಳ್ಳೆಯ ಕಾರ್ಯಗಳನ್ನು ಮಾಡಲು ಸ್ಫೂರ್ತಿಯಾಗುತ್ತದೆ ಮತ್ತು ಈ ಭೂಮಿ ಬದುಕಲು ಯೋಗ್ಯವಾದ ಸ್ಥಳವಾಗುವುದು ಇಂತಹ ಸಣ್ಣ ಸಣ್ಣ ಕೆಲಸಗಳ ನಿರಂತರ ಸರಣಿಯಿಂದ ಮಾತ್ರ.

ನಮ್ಮ ಮಕ್ಕಳಿಗೆ ನಾವು ಪಾಠದಂತೆ ತಿಳಿಹೇಳುವ ಬದಲಾಗಿ, ನಾವು ಬದುಕುವ ರೀತಿಯನ್ನೇ ಮಾದರಿಯಾಗಿ ಅನುಸರಣೆ ಮಾಡುವಂತೆ ಮಾಡೋಣ. ತಮ್ಮೂಲಕ ನಾವು ಒಳ್ಳೆಯ ರೀತಿ ಬದುಕೋಣ.

• ರೊ. ಎಂ. ಮಾಧವಾಚಾರ್






*Dr. Usha Prabhu*
*28th Nov*



## Happy Birthday Wishes



*Mohan H S*
*30th Nov*

## Wedding Anniversary

| | |
|---|---|
| *Sathish Kumar &Roopa* | *1st November* |
| *H.M. Vagdevi& Mr. Kashipathi Alse* | *9th November* |
| *N.S.Sridhar&Suneetha* | *10th November* |
| *ViswasYelaburgi &Shruthi* | *11th November* |
| *G.N.Sudheer & Sahana* | *11th November* |
| *Manjunath S & Smt. Hemavathi* | *11th November* |
| *Rudresh & Shobha* | *14th November,* |
| *B.M.Gopal & Girija* | *14th November* |

### ಚಿಂತನ

**ದ್ವೇಷ, ಅಸೂಯೆ, ಹತಾಶೆ, ಕೋಪ, ಅಹಂಕಾರ ಇವುಗಳೆಲ್ಲ ಮನಸ್ಸಿನ ಕಾರಾಗೃಹಗಳಿದ್ದಂತೆ. ಇವುಗಳ ಜೊತೆ ಜೀವಿಸುವುದನ್ನು ಅಭ್ಯಾಸ ಮಾಡಿಕೊಂಡರೆ ಜೀವಾವಧಿ ಶಿಕ್ಷೆಯನ್ನು ಅನುಭವಿಸಿದಂತೆ. ಮೊದಲು ಇವುಗಳಿಂದ ಸ್ವತಂತ್ರರಾಗಬೇಕು. ಇವುಗಳ ಬಗ್ಗೆ ಮಕ್ಕಳಿಗೆ ಮಾರ್ಗದರ್ಶನ ಮಾಡುವುದು ಅಗತ್ಯ.**

– ರೊ. ಕೆ. ಸೂರ್ಯನಾರಾಯಣ ಉಡುಪ

To,

*Book Post*